

# ಗುಬ್ಬಿಯಾಡೊ ಗುಬ್ಬಿಯಾಡೊ

ಶ್ರೀ ವಾದಿರಾಜರು

www.aradhanam.org

ಗುಬ್ಬಿಯಾಡೊ ಗುಬ್ಬಿಯಾಡೊ ಗುಬ್ಬಿಯಾಡೊ ಗೋವಿಂದಾ

ಗೋವಿಂದಾ ಗೋವಿಂದಾ ನೆಂದು

ಗೋವಿಂದಾ ನೆನೆಯಿರೊ

ಗುಬ್ಬಿಯಾಡೊ ಗುಬ್ಬಿಯಾಡೊ ಗುಬ್ಬಿಯಾಡೊ ಗೋವಿಂದಾ

ಕೇಶವನ್ನ ನೆನೆದರೆ ಕ್ಲೇಶ ಪರಿಹಾರವು

ಗುಬ್ಬಿಯಾಡೊ ಗುಬ್ಬಿಯಾಡೊ

ನಾರಾಯಣನ ಧ್ಯಾನದಿಂದ ನರಕ ಭಯವಿಲ್ಲವೊ

ಗುಬ್ಬಿಯಾಡೊ ಗುಬ್ಬಿಯಾಡೊ [ ೧ ]

ಮಾಧವನ್ನ ನೆನೆದರೆ ಮನೋಭೀಷ್ಟ ಕೊಡುವೊನು

ಗುಬ್ಬಿಯಾಡೊ ಗುಬ್ಬಿಯಾಡೊ

ಗೋವಿಂದನ್ನ ದಯದಿಂದ ಘೋರದುರಿತ ನಾಶನವು

ಗುಬ್ಬಿಯಾಡೊ ಗುಬ್ಬಿಯಾಡೊ [ ೨ ]

ವಿಷ್ಣು ಭಜನೆ ಯಿಲ್ಲದವಗೆ ವೈಷ್ಣವರ ಜನ್ಮವುಂಟೇ

ಗುಬ್ಬಿಯಾಡೊ ಗುಬ್ಬಿಯಾಡೊ

ಮಧುಸೂದನನ ಧ್ಯಾನದಿಂದ ಅತಿಶಯವು ಇಹುದೊ

ಗುಬ್ಬಿಯಾಡೊ ಗುಬ್ಬಿಯಾಡೊ [ ೩ ]

ತ್ರಿವಿಕ್ರಮನ ನೆನೆದರೆ ಸಾವಿತ್ರಿಯಾಗಿಹರೊ

ಗುಬ್ಬಿಯಾಡೊ ಗುಬ್ಬಿಯಾಡೊ

ವಾಮನದೇವರು ನಮಗೆ ವರಗಳ ಕೊಡುವೋರು

ಗುಬ್ಬಿಯಾಡೊ ಗುಬ್ಬಿಯಾಡೊ [೪]

ಶ್ರೀಧರನ್ನ ನೆನೆದರೆ ಸಿರಿ ನಮಗೆ ಒಲಿವಳೊ

ಗುಬ್ಬಿಯಾಡೊ ಗುಬ್ಬಿಯಾಡೊ

ಹೃಷೀಕೇಶನ ಧ್ಯಾನದಿಂದ ಹೃದಯ ಪರಿಶುದ್ಧವೊ

ಗುಬ್ಬಿಯಾಡೊ ಗುಬ್ಬಿಯಾಡೊ [೫]

ಪದ್ಮನಾಭ ನಮ್ಮೆಲ್ಲರ ಪಾಲಿಸಿ ರಕ್ಷಿಪನೊ

ಗುಬ್ಬಿಯಾಡೊ ಗುಬ್ಬಿಯಾಡೊ

ದಾಮೋದರನ ನೆನೆದರೆ ಪಾಮರತ್ವ ಬಿಡಿಸುವನೊ

ಗುಬ್ಬಿಯಾಡೊ ಗುಬ್ಬಿಯಾಡೊ [೬]

ಸಂಕರ್ಷಣನ ಧ್ಯಾನದಿಂದ ಸಂತಾನ ಅಭಿವೃದ್ಧಿಯು

ಗುಬ್ಬಿಯಾಡೊ ಗುಬ್ಬಿಯಾಡೊ

ವಾಸುದೇವನ ದಯದಿಂದ ವಂಸ ಉದ್ಧಾರವೊ

ಗುಬ್ಬಿಯಾಡೊ ಗುಬ್ಬಿಯಾಡೊ [೭]

ಪ್ರದ್ಯುಮ್ನನ ನೆನೆದರೆ ಭೂಪ್ರದಕ್ಷಿಣೆ ಫಲವು

ಗುಬ್ಬಿಯಾಡೊ ಗುಬ್ಬಿಯಾಡೊ

ಅನಿರುದ್ಧನ ಸೇವಿಸೆ ಪುನೀತರಹೆವೊ

ಗುಬ್ಬಿಯಾಡೊ ಗುಬ್ಬಿಯಾಡೊ [೮]

ಪುರುಷೋತ್ತಮನ್ನ ಪುರಾಣ ಪುರುಷನೆಂದು ತಿಳಿಯಿರೊ

ಗುಬ್ಬಿಯಾಡೊ ಗುಬ್ಬಿಯಾಡೊ

ಅಧೋಕ್ಷಜ ನಮ್ಮೆಲ್ಲರಿ ಗಾಧಾರವಾಗಿಹನೊ

ಗುಬ್ಬಿಯಾಡೊ ಗುಬ್ಬಿಯಾಡೊ [೯]

ನರಸಿಂಹದೇವರು ನಮ್ಮ ಕುಲದೈವವೊ

ಗುಬ್ಬಿಯಾಡೊ ಗುಬ್ಬಿಯಾಡೊ

ಅಚ್ಯುತ ಲಕ್ಷ್ಮಿಯ ಕುಡಿ ಸಚ್ಚಿದಾನಂದನೊ

ಗುಬ್ಬಿಯಾಡೊ ಗುಬ್ಬಿಯಾಡೊ [೧೦]

ಜನಾರ್ದನದೇವರು ಜಗಕೆಲ್ಲ ಶ್ರೇಷ್ಠರೊ

ಗುಬ್ಬಿಯಾಡೊ ಗುಬ್ಬಿಯಾಡೊ

ಉಪೇಂದ್ರನು ನಮ್ಮ ಅಪರಾಧವ ಕ್ಷಮಿಸುವನೊ

ಗುಬ್ಬಿಯಾಡೊ ಗುಬ್ಬಿಯಾಡೊ [೧೧]

ಹರಿ ನಾಮಾಮೃತಕೆ ಸರಿ ಧರೆಯೊಳಗೆ ಇಲ್ಲವೊ

ಗುಬ್ಬಿಯಾಡೊ ಗುಬ್ಬಿಯಾಡೊ

ಶ್ರೀಕೃಷ್ಣ ರಂಗೇಶಯೆಂಬೊ ಸಿದ್ಧಕ್ರಿಯ ಬಲ್ಲರೆ

ಗುಬ್ಬಿಯಾಡೊ ಗುಬ್ಬಿಯಾಡೊ [೧೨]

ಈ ಗುಬ್ಬಿ ಪಾಡುವರಿಗೆ ಇಹ ಪರವು ಸಂತತವು

ಗುಬ್ಬಿಯಾಡೊ ಗುಬ್ಬಿಯಾಡೊ

ಧರಣಿಯೊಲು ಆಚಂದ್ರರ್ಕ ತಾರಕವಾಗಿಹರು

ಗುಬ್ಬಿಯಾಡೊ ಗುಬ್ಬಿಯಾಡೊ [೧೩]

ಹಯವದನನ್ನ ಪಾದಧ್ಯಾನ

ಮರೆಯದೆ ನೆನೆ ಮನವೆ

ನಮ್ಮ ಹಯವದನನ್ನ ಪಾದವೇ ನಿತ್ಯ ಮನವೆ

ಗುಬ್ಬಿಯಾಡೊ ಗುಬ್ಬಿಯಾಡೊ [೧೪]

## ಸರ್ವಂ ಶ್ರೀ ಕೃಷ್ಣಾರ್ಪಣಮಸ್ತು